**ಓ.ಎಸ್. ನಂಃ 166/2020**

**ಪಿ.ಡಬ್ಲ್ಯೂಃ 1**

**ದಿನಾಂಕ 16.06.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯ ಪರ: ಶ್ರೀ.ಎಲ್.ವಿ.ಆರ. ವಕೀಲರಿಂದಃ**

5. ದಾವಾ ಆಸ್ತಿಯು ಮೂಲತಃ ಹೊಂಬಮ್ಮರವರ ಗಂಡ ಲಕ್ಕೇಗೌಡರಿಗೆ ಸೇರಿದ ಆಸ್ತಿ ಎಂದು ನಾನು ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಿಪಿ.1 ರ ಮೂಲ ದಾಖಲಾತಿ ನನ್ನ ಮನೆಯಲ್ಲಿದೆ. ನನ್ನ ತಂದೆಯಾದ ಲಕ್ಕೇಗೌಡರಿಗೆ ಒಟ್ಟು 5 ಜನ ಮಕ್ಕಳಿದ್ದು, ಅವರಪೈಕಿ ಮೂರು ಜನ ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ. ನನ್ನ ಸಹೋದರಿಯರ ಹೆಸರು ಸುಗುಣಾ ಮತ್ತು ಶೀಲಾ ಅಂತ ಇದ್ದು, ನನ್ನ ಇನ್ನೊಬ್ಬ ಸಹೋದರನ ಹೆಸರು ಆನಂದ ಅಂತ ಇರುತ್ತದೆ. ಸದರಿ ಆನಂದ ರವರು ಮರಣ ಹೊಂದಿದ್ದು, ಅವರ ಹೆಂಡತಿ ಮತ್ತು ಮಕ್ಕಳು ಜೀವಂತವಿದ್ದಾರೆ. ನನ್ನ ಎರಡು ಜನ ಸಹೋದರಿಯರು ಸಹ ಜೀವಂತವಿದ್ದಾರೆ. ದಾವಾ ಆಸ್ತಿಯಲ್ಲಿ ನನ್ನ ತಂದೆಯ ಮೇಲೆ ಹೇಳಿದ 5 ಜನ ಮಕ್ಕಳಿಗೂ ಸಮಾನ ಹಕ್ಕು ಇದೆ.

6. ಸರ್ವೇ ನಂಬರ್ 20 ರ 6 ಎಕರೆ 31 ಗುಂಟೆ ಜಮೀನಿನಲ್ಲಿ ಲಕ್ಕೇಗೌಡರ ಎಲ್ಲಾ ಮಕ್ಕಳಿಗೂ ಸಮಾನ ಹಕ್ಕು ಇದೆ ಎಂದರೆ ಸರಿ. ದಿನಾಂಕ 12.04.1971 ರಂದು ನನ್ನ ತಂದೆಯಾದ ಲಕ್ಕೇಗೌಡರು ಸರ್ವೇ ನಂಬರ್ 20 ರಲ್ಲಿ 1 ಎಕರೆ 5 ಗುಂಟೆ ಜಮೀನನ್ನು ಖರೀದಿಸಿದ್ದರು ಎಂದರೆ ಸರಿ. ಅದಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ನಾನು ನ್ಯಾಯಾಲಯ ಹಾಜರುಪಡಿಸಿರುತ್ತೇನೆ.

7. 1964 ರಲ್ಲಿ ನಡೆದ ಮೌಖಿಕ ಪಾಲು ವಿಭಜನೆಯಲ್ಲಿ ಸರ್ವೇ ನಂಬರ್ 20 ರ 1 ಎಕರೆ 5 ಗುಂಟೆ ಜಮೀನು ನನ್ನ ದೊಡ್ಡಪ್ಪನಾದ ಎಸ್.ಎಲ್ ಮರೀಗೌಡರ ಹಿಸ್ಸೆಗೆ ಹೋಗಿರುತ್ತದೆ ಎಂದರೆ ಸರಿ. ತಮ್ಮ ಹಿಸ್ಸೆಗೆ ಬಂದಿದ್ದ ಸರ್ವೇ ನಂಬರ್ 20 ರ ಸದರಿ 1 ಎಕರೆ 5 ಗುಂಟೆ ಜಮೀನನ್ನು ನನ್ನ ದೊಡ್ಡಪ್ಪನಾದ ಎಸ್.ಎಲ್ ಮರೀಗೌಡರು ದಿನಾಂಕ 22.07.1969 ರಂದು ಪ್ರತಿವಾದಿಯರ ತಾಯಿಯಾದ ಲಕ್ಷ್ಮಮ್ಮರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

8. 1964 ರಲ್ಲಿ ನಡೆದ ಮೌಖಿಕ ಪಾಲು ವಿಭಜನೆಯಲ್ಲಿ ಸರ್ವೇ ನಂಬರ್ 20 ರ 1 ಎಕರೆ 5 ಗುಂಟೆ ಜಮೀನು ಪ್ರತಿವಾದಿಯರ ತಂದೆಯಾದ ಎಸ್.ಎಲ್.ಅಪ್ಪೇಗೌಡರ ಹಿಸ್ಸೆಗೆ ಹೋಗಿರುತ್ತದೆ ಎಂದರೆ ಸರಿ. ಸದರಿ ಮೌಖಿಕ ಪಾಲು ವಿಭಜನೆ ಆದ ದಿನದಿಂದ ತಮ್ಮ ಮರಣದ ವರೆಗೂ ಪ್ರತಿವಾದಿಯರ ತಂದೆಯಾದ ಎಸ್.ಎಲ್.ಅಪ್ಪೇಗೌಡರೇ ತಮ್ಮ ಹಿಸ್ಸೆಗೆ ಬಂದಿದ್ದ ಸರ್ವೇ ನಂಬರ್ 20 ರ 1 ಎಕರೆ 5 ಗುಂಟೆ ಜಮೀನನ್ನು ಸ್ವಾಧೀನ ಹೊಂದಿದ್ದು, ಅವರ ಮರಣದ ನಂತರ ಪ್ರತಿವಾದಿಯರೇ ಸದರಿ ಜಮೀನಿನ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ಪ್ರತಿವಾದಿಯರ ತಂದೆಯಾದ ಎಸ್.ಎಲ್.ಅಪ್ಪೇಗೌಡರ ಹಿಸ್ಸೆಗೆ ಬಂದಿದ್ದ ಸರ್ವೇ ನಂಬರ್ 20 ರ 1 ಎಕರೆ 5 ಗುಂಟೆ ಜಮೀನಿಗೆ ನಾವೇ ಹೋಗಿ ತೊಂದರೆ ಕೊಟ್ಟು ಈ ಸುಳ್ಳು ದಾವೆಯನ್ನು ಹೂಡಿರುತ್ತೇವೆ ಎಂದರೆ ಸರಿಯಲ್ಲ.

9. 1964 ರಲ್ಲಿ ನಡೆದ ಮೌಖಿಕ ಪಾಲು ವಿಭಜನೆಯಲ್ಲಿ ಪ್ರತಿವಾದಿಯರ ತಂದೆಯಾದ ಎಸ್.ಎಲ್.ಅಪ್ಪೇಗೌಡರ ಹಿಸ್ಸೆಗೆ ಬಂದಿದ್ದ ಸರ್ವೇ ನಂಬರ್ 20 ರ 1 ಎಕರೆ 5 ಗುಂಟೆ ಜಮೀನು ಹಾಗೂ ದಿನಾಂಕ 22.07.1969 ರಲ್ಲಿ ಪ್ರತಿವಾದಿಯರ ತಾಯಿಯಾದ ಲಕ್ಷ್ಮಮ್ಮ ರವರು ಖರೀದಿಸಿದ್ದ ಸರ್ವೇ ನಂಬರ್ 20 ರ 1 ಎಕರೆ 5 ಗುಂಟೆ ಜಮೀನು ಸೇರಿಸಿ, ಒಟ್ಟು ಸರ್ವೇ ನಂಬರ್ 20 ರ 2 ಎಕರೆ 10 ಗುಂಟೆ ಜಮೀನಿನ ಸ್ವಾಧೀನದಲ್ಲಿ ಪ್ರತಿವಾದಿಯರೇ ಇದ್ದು, ಸದರಿ 2 ಎಕರೆ 10 ಗುಂಟೆ ಜಮೀನಿಗೆ ನಾವೇ ಹೋಗಿ ತೊಂದರೆ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ.

10. ಸರ್ವೇ ನಂಬರ್ 20 ರಲ್ಲಿ ನಮಗೆ ಇದ್ದ 4 ಎಕರೆ 19 ಗುಂಟೆ ಜಮೀನಿನ ಪೈಕಿ 21 ಗುಂಟೆ ಜಮೀನನ್ನು ದಿನಾಂಕ 30.03.2007 ರಂದು ಹಾಗೂ ಸರ್ವೇ ನಂಬರ್ 20 ರ 39 ಗುಂಟೆ ಜಮೀನನ್ನು ದಿನಾಂಕ 07.07.2008 ರಂದು ರಾಜೇಶ್ವರಿ ಕೋಂ.ಅಶೋಕ ಎನ್ನುವವರಿಗೆ ಮಾರಾಟ ಮಾಡಿರುತ್ತೇವೆ ಎಂದರೆ ಸರಿ. ಸರ್ವೇ ನಂಬರ್ 20 ರಲ್ಲಿ 3 ಎಕರೆ ಜಮೀನಿನ ಸಂಬಂಧ ದಿನಾಂಕ 24.08.2015 ರ ವಿಭಾಗ ಪತ್ರವನ್ನು ಮಾಡಿಕೊಂಡಿರುತ್ತೇವೆ. ಸದರಿ ವಿಭಾಗ ಪತ್ರವನ್ನು ಮಾಡಿಕೊಳ್ಳುವ ಪೂರ್ವದಲ್ಲಿ ನಾವು 11-ಇ ನಕಾಶೆಯನ್ನು ಮಾಡಿಕೊಂಡಿರುತ್ತೇವೆ.

11. ದಿನಾಂಕ 24.08.2015 ರ ವಿಭಾಗ ಪತ್ರದ ಮೂಲಕ ತಮಗೆ ಬಂದಿದ್ದ ಸರ್ವೇ ನಂಬರ್ 20/6 ರ 1 ಎಕರೆ 20 ಗುಂಟೆ ಜಮೀನಿನ ಪೈಕಿ 3 ಗುಂಟೆ ಜಮೀನನ್ನು 1 ನೇ ವಾದಿಯು ದಿನಾಂಕ 29.05.2017 ರಂದು ನವೀನ್ ಕುಮಾರ್ ಸಿ.ಎನ್ ಬಿನ್ ನರಸಿಂಹೇಗೌಡರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಅದೇ ರೀತಿ ದಿನಾಂಕ

24.08.2015 ರ ವಿಭಾಗ ಪತ್ರದ ಮೂಲಕ ತಮಗೆ ಬಂದಿದ್ದ ಸರ್ವೇ ನಂಬರ್ 20/3 ರ 1 ಎಕರೆ 18 ಗುಂಟೆ ಜಮೀನಿನ ಪೈಕಿ 20 ಗುಂಟೆ ಜಮೀನನ್ನು 2 ನೇ ವಾದಿಯು ದಿನಾಂಕ 24.06.2019 ರಂದು ಗೋವಿಂದರಾಜು ಎಸ್.ಕೆ. ಬಿನ್ ಲೇಟ್ ಕೃಷ್ಣೇಗೌಡ ಎನ್ನುವವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ.

12. 2020 ರಲ್ಲಿ ದಾವಾ ಆಸ್ತಿಯ ಮಾರುಕಟ್ಟೆ ಬೆಲೆ 5 ಲಕ್ಷ ರೂಪಾಯಿಗಿಂತ ಹೆಚ್ಚಿತ್ತು ಎಂದರೆ ಸರಿಯಲ್ಲ. ಪ್ರತಿವಾದಿಯ ತಂದೆ ಮತ್ತು ತಾಯಿ ಸರ್ವೇ ನಂಬರ್ 20 ರಲ್ಲಿ ಗಳಿಸಿದ 2 ಎಕರೆ 10 ಗುಂಟೆ ಜಮೀನನ್ನು ಕಬಳಿಸುವ ಉದ್ದೇಶದಿಂದ ನಾವು ಈ ಸುಳ್ಳು ದಾವೆಯನ್ನು ಹೂಡಿರುತ್ತೇವೆ ಎಂದರೆ ಸರಿಯಲ್ಲ. ನಮಗೆ ದಾವಾ ಆಸ್ತಿಯ ಮೇಲೆ ಯಾವುದೇ ಹಕ್ಕು, ಸ್ವಾಧೀನ ಮತ್ತು ಹಿತಾಸಕ್ತಿ ಇಲ್ಲದಿದ್ದರೂ ಸಹ ನಾವು ಸುಳ್ಳು ದಾವೆಯನ್ನು ಹೂಡಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.1 ರ ವ್ಯವಸ್ಥಾ ಪತ್ರವಾದ ನಂತರದಲ್ಲಿ ನಾವು ದಾವಾ ಆಸ್ತಿಯನ್ನು ಅಳತೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.1 ರ ದಾಖಲೆಯ ನಂತರದಲ್ಲಿ ಅಳತೆ ಮಾಡಿದ ಬಗ್ಗೆ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ.

13. ಪ್ರತಿವಾದ ಪತ್ರ ಅನುಸೂಚಿ ಆಸ್ತಿಯ ಚೆಕ್ಕುಬಂಧಿ ಸರಿಯಾಗಿದೆ. ಪ್ರತಿವಾದ ಪತ್ರ ಅನುಸೂಚಿ ಆಸ್ತಿಯ ಮೇಲೆ ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರ ಪ್ರತಿವಾದ ಪತ್ರ ಅನುಸೂಚಿ ಆಸ್ತಿಗೆ ತೊಂದರೆ ಕೊಡುವ ಉದ್ದೇಶದಿಂದ ನಾವು ಈ ಸುಳ್ಳು ದಾವೆಯನ್ನು ಹೂಡಿರುತ್ತೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**